# ದೀಪಾವಳಿಗೆ ಮತ್ತೆ ಸಿಂಗಂ ಪಟಾಕಿ





‘ಸಿಂಗಂ’ ಎಂಬ ಸಿನಿಮಾ ಬ್ರ್ಯಾಂಡ್ ಒಂದನ್ನೇ ಇಟ್ಟುಕೊಂಡು ರೋಹಿತ್ ಶೆಟ್ಟಿ ತಮ್ಮ ನಿರ್ದೇಶನದ ಟೆಸ್ಟ್ ಸರಣಿಯನ್ನು ಆಡುತ್ತಲೇ ಇದ್ದಾರೆ. ಇದು ಒಂದು ರೀತಿಯಲ್ಲಿ ಬಹಳ ಸುರಕ್ಷಿತವಾದ ಆಟ. ತಮಿಳಿನ ‘ಸಿಂಗಂ’ ಹೂರಣವನ್ನು ಇನ್ನೂ ದೊಡ್ಡ ಬಜೆಟ್‌ನಲ್ಲಿ ಪ್ರಸ್ತುತಪಡಿಸಿ ಗೆದ್ದುದು ರೋಹಿತ್ ಜಾಣ ಮಾರುಕಟ್ಟೆ ತಂತ್ರವೇ ಹೌದು. ಎಲ್ಲ ಭಾಷೆಯ ಸಿನಿಮಾಗಳೂ ಹಿಂದಿಗೆ ಡಬ್ ಆಗುತ್ತಿರುವ ಈ ದಿನಮಾನದಲ್ಲೂ ಒಂದು ರೀಮೇಕ್ ಸಿನಿಮಾ ಎಳೆಯನ್ನೇ ಹಿಂಜಿಕೊಂಡು ಯೂನಿವರ್ಸ್ ಸೃಷ್ಟಿಸುವುದು ಕೂಡ ಸವಾಲೇ. ‘ಟೆಂಪರ್’ ತೆಲುಗು ಚಿತ್ರವನ್ನು ‘ಸಿಂಬಾ’ ಹೆಸರಿನಲ್ಲಿ ರೀಮೇಕ್ ಮಾಡಿ, ಗೆಲುವು ತಂದುಕೊಟ್ಟ ನಿರ್ದೇಶಕ ಕೂಡ ಇದೇ ರೋಹಿತ್ ಶೆಟ್ಟಿ.

ಈಗ ‘ಸಿಂಗಂ ಅಗೇನ್’ ಸಿನಿಮಾ ಕುರಿತ ಮಾತು ಮತ್ತೆ ಕಾವು ಪಡೆದುಕೊಂಡಿದೆ. ದೀಪಾವಳಿ ಹೊತ್ತಿಗೆ ಈ ಚಿತ್ರ ಬಿಡುಗಡೆಯಾಗುವುದು ಈಗ ಖಚಿತವಾಗಿದೆ.

ಹಾಗೆ ನೋಡಿದರೆ, ಈ ಚಿತ್ರವು ಆಗಸ್ಟ್ ಹೊತ್ತಿಗೇ ತೆರೆಕಾಣಬೇಕಿತ್ತು. ಚಿತ್ರೀಕರಣ, ಮರು ಚಿತ್ರೀಕರಣದ ಕಾರಣದಿಂದಾಗಿ ಆಗ ಬಿಡುಗಡೆ ಸಾಧ್ಯವಿಲ್ಲ ಎನ್ನುವುದನ್ನು ನಾಯಕ ಅಜಯ್ ದೇವಗನ್ ಸ್ಪಷ್ಟಪಡಿಸಿದ್ದರು. ಕರೀನಾ ಕಪೂರ್ ನಾಯಕಿಯಾಗಿರುವ ‘ಸಿಂಗಂ ಅಗೇನ್’ ಚಿತ್ರದಲ್ಲಿ ಅತಿಥಿ ಪಾತ್ರಗಳಲ್ಲಿ ರಣವೀರ್ ಸಿಂಗ್, ದೀಪಿಕಾ ಪಡುಕೋಣೆ ಹಾಗೂ ಅಕ್ಷಯ್ ಕುಮಾರ್ ಕೂಡ ಕಾಣಿಸಿಕೊಳ್ಳಲಿದ್ದಾರೆ. ಸಲ್ಮಾನ್ ಖಾನ್ ಸಹ ಅತಿಥಿಯಾಗಿ ತೆರೆಮೇಲೆ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಕೆಲವು ನಿಮಿಷಗಳಷ್ಟೆ ಇವರೆಲ್ಲ ಕಾಣಿಸಿಕೊಂಡರೂ ಶಿಳ್ಳೆ ಬೀಳುವುದು ಗ್ಯಾರಂಟಿ ಎಂಬ ಆತ್ಮವಿಶ್ವಾಸದಲ್ಲಿ ನಿರ್ದೇಶಕ ರೋಹಿತ್ ಶೆಟ್ಟಿ ಇದ್ದಾರೆ.

ದೀಪಿಕಾ ಗರ್ಭಿಣಿಯಾದ ನಂತರ ಈ ಚಿತ್ರದ ಸಣ್ಣ ದೃಶ್ಯವನ್ನು ಮುಗಿಸಿಕೊಟ್ಟಿದರು ಎನ್ನುವ ಸಂಗತಿಯೂ ಪ್ರಚಾರಕ್ಕೆ ಪೂರಕವಾಗಿ ಒದಗಿಬಂದಿತ್ತು. ಇದೀಗ ‘ಸಿಂಗಂ’ ಹಳೆಯ ಪಟಾಕಿಯನ್ನು ಹೊಸತಾಗಿ ಎಷ್ಟು ದೊಡ್ಡ ಸದ್ದು ಕೇಳುವಂತೆ ರೋಹಿತ್ ಮಾಡಿದ್ದಾರೆ ಎನ್ನುವ ಕುತೂಹಲವಷ್ಟೇ ಉಳಿದಿದೆ.

ಖುದ್ದು ರೋಹಿತ್ ಶೆಟ್ಟಿ, ಅಜಯ್ ದೇವಗನ್ ಬಂಡವಾಳ ಹೂಡಿರುವ ಚಿತ್ರಕ್ಕೆ ಜ್ಯೋತಿ ದೇಶಪಾಂಡೆ ಅವರ ನಿರ್ಮಾಣದ ಸಾಥ್ ಇದೆ. ಒಂದೂವರೆ ದಶಕ ಒಂದೇ ಬ್ರ್ಯಾಂಡ್ ಸಿನಿಮಾ ಮಾಡುವ ರೋಹಿತ್ ಶೆಟ್ಟಿ ಅವರ ಇಂತಹ ಜಾಯಮಾನ ಕೂಡ ವಿಶ್ಲೇಷಣಾರ್ಹ. ■



# ಸಲ್ಮಾನ್.. ‘ಈದ್’ ಕಮಾಲ್

‘ಈದ್’ ಬಂತು ಎಂದರೆ ಸಲ್ಮಾನ್ ಖಾನ್ ಮುಖದ ಗೆರೆಗಳಲ್ಲಿ ಹಳೆಯ ಖುಷಿಯ ಗೆರೆಯೊಂದನ್ನು ಅಭಿಮಾನಿಗಳು ಗುರ್ತಿಸುತ್ತಾರೆ. ಆ ಗೆರೆಯಲ್ಲಿನ ಕಥಾಕಾಣ್ಕೆ ದಕ್ಷಿಣ ಭಾರತದ ಚಿತ್ರದ್ದು. 2000ನೇ ಇಸವಿಯಿಂದ ಏಳೆಂಟು ವರ್ಷ ಸತತ ಹದಿನೆಂಟು ಸಿನಿಮಾ ಸೋಲುಗಳಿಂದ ಸಲ್ಮಾನ್ ಕಂಗೆಟ್ಟಿದ್ದರು. ಆಗ ಅವರ ಎದುರಿಗೆ ಬಂದದ್ದು ತೆಲುಗಿನ ಯಶಸ್ವಿ ಸಿನಿಮಾದ ಸ್ಕ್ರಿಪ್ಟ್; ಅದೂ ಶಾರುಕ್ ಖಾನ್ ಅದಾಗಲೇ ತಿರಸ್ಕರಿಸಿದ್ದು. ಬೋನಿ ಕಪೂರ್ ಋಣಸಂದಾಯಕ್ಕೆ ಕಟ್ಟುಬಿದ್ದು ಅದನ್ನು ಸಲ್ಮಾನ್ ಒಪ್ಪಿಕೊಂಡರು. ಅದೇ ‘ವಾಂಟೆಡ್’; ತೆಲುಗಿನಲ್ಲಿ ಭಾರಿ ಗೆಲುವು ಸಾಧಿಸಿದ್ದ ‘ಪೋಕಿರಿ’ಯ ರೀಮೇಕ್.

‘ಈದ್’ ಹೊತ್ತಿಗೆ ಸಿನಿಮಾ ಬಿಡುಗಡೆ ಮಾಡುವ ಪರಿಪಾಟವನ್ನು ಸಲ್ಮಾನ್ ಶುರುಮಾಡಿದ್ದು ಆ ಚಿತ್ರದಿಂದಲೇ. ಅದು ಅದ್ಭುತ ಯಶಸ್ಸು ತಂದುಕೊಟ್ಟಿತು. 35 ಕೋಟಿ ರೂಪಾಯಿ ಬಂಡವಾಳದ ಚಿತ್ರವು ದುಪ್ಪಟ್ಟಿಗೂ ಮೀರಿ ಗಳಿಸಿತು. ಬರೀ 12 ಕೋಟಿ ರೂಪಾಯಿ ಹಣದಲ್ಲಿ ತಯಾರಾಗಿದ್ದ ‘ಪೋಕಿರಿ’ ಸಿನಿಮಾ, ಮಹೇಶ್ ಬಾಬು ವೃತ್ತಿಬದುಕಿನ ದೊಡ್ಡ ಯಶಸ್ಸುಗಳಲ್ಲಿ ಒಂದು. ಅನೇಕ ಭಾಷೆಗಳಿಗೆ ಅದು ಡಬ್ ಆಗಿಯೂ ವಿಜಯಪತಾಕೆ ಹಾರಿಸಿದ್ದನ್ನು ನಾವು ಕಂಡಿದ್ದೇವೆ. ಆದರೆ, ಸಲ್ಮಾನ್ ಮಟ್ಟಿಗೆ ಅದು ಒಂದು ರೀತಿ ಪ್ರಯೋಗದ ನಿಕಷಕ್ಕೆ ಒಡ್ಡಿಕೊಂಡ ಯತ್ನ ಆಗಿತ್ತು.

‘ವಾಂಟೆಡ್’ ಚಿತ್ರ ನಿರ್ದೇಶಿಸಲು ದಕ್ಷಿಣ ಭಾರತದ ಭಾಷೆಗಳ ಅರಿವು ಇರುವ ನಿರ್ದೇಶಕ ಬೇಕಿತ್ತು. ಹೀಗಾಗಿ ಪ್ರಭುದೇವ ಅವರಿಗೆ ನಿರ್ದೇಶಕನ ಟೋಪಿ ತೊಡುವ ಅವಕಾಶ ಒಲಿದುಬಂತು. ಈ ಮೂಲಕ ದಕ್ಷಿಣ ಭಾರತ ಚಿತ್ರರಂಗದ ಫಾರ್ಮುಲಾ ಒಂದು ಹಿಂದಿಯ ಸ್ಟಾರ್ ನಟನಿಗೆ ಮರುಜನ್ಮ ನೀಡಿತು.

ನಿರ್ದೇಶಕರ ವಿಷಯದಲ್ಲಿ ಸಲ್ಮಾನ್ ಈಗಲೂ ಪ್ರಯೋಗಮುಖಿಯೇ ಹೌದು. ■